ತೊಂದರೆಯಾಗಲಿದೆ. ಈಗ ಏಕೆ ಹೀಗಾಗುತ್ತಿದೆ? ಆದ್ದರಿಂದ ಇದನ್ನು ತುರ್ತಾಗಿ ಭಾವಿಸಿ ಕುಡಿಯುವ ನೀರು ಒದಗಿಸಿ ಸಿಕ್ಕುವಂತೆ ಮಾಡಬೇಕು. ಈ ಕುರಿತು ನಗರಾಭಿವೃದ್ದಿ ಸಚಿವರು ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ದಿ ಸಚಿವರು ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಾವೂರು ಪ್ರದೇಶದ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ವಿದ್ಯುತ್ ಪರಿವರ್ತವು (ಟ್ರಾನ್‌ಪಾರ್ಮರ್) ಸುಮಾರು ಎರಡು ತಿಂಗಳ ಹಿಂದೆ ಕೆಟ್ಟು ಹೋಗಿರುತ್ತದೆ. ವಿದ್ಯುಚ್ಛಕ್ತಿ ಮಂಡಳಿಯು ತಾತ್ಕಾಲಿಕವಾಗಿ ದುರಸ್ತಿ ಮಾಡಿ ಕಡಿಮೆ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸಿದ್ದು, ಇದರ ನಿಮಿತ್ತ ಇದಕ್ಕೆ ಬೇಕಾದ ಎರಡು ಪಂಪುಗಳನ್ನು ಅವಿರತವಾಗಿ ನಡೆಸಲು ಸಾಧ್ಯವಾಗುತ್ತಿಲ್ಲ. ಪ್ರತಿ ದಿವಸ ಕನಿಷ್ಟ 5 ಗಂಟೆಗಳ ವಿರಾಮವನ್ನು ನೀಡಬೇಕಾಗುತ್ತದೆ. ಆದ್ದರಿಂದ ಪಂಪು ಮಾಡಬೇಕಾದಂತಹ ನೀರಿನ ಪ್ರಮಾಣವು ಕಡಿಮೆಯಾಗಿರುತ್ತದೆ. ಆದ್ದರಿಂದ ಸೂಚನೆಯಲ್ಲಿ ನಮೂದಿಸಿದ ಸ್ಥಳಗಳು ಸರಬರಾಜು ವ್ಯವಸ್ಥೆಯ ಕೊನೆಯಲ್ಲಿರುವುದರಿಂದ ಈ ಸ್ಥಳಗಳಿಗೆ 'ಅದರಲ್ಲೂ ವಿಶೇಷವಾಗಿ ಎತ್ತರದಲ್ಲಿರುವ ಮನೆಗಳಿಗೆ , ಸಾಕಷ್ಟು ಪ್ರಮಾಣದಲ್ಲಿ ನೀರು ದೊರೆಯುತ್ತಿಲ್ಲ. ಈ ಸಮಸ್ಯೆಯನ್ನು ಹೋಗಲಾಡಿಸಲು ಸಧ್ಯಕ್ಕೆ ಬೇರೆ ಪ್ರದೇಶಗಳಲ್ಲಿ ನೀರಿನ ಸರಬರಾಜಿನ ವೇಳೆಯನ್ನು ಕಡಿತಗೊಳಿಸಿ ಸಮಸ್ಯಾತ್ಮಕ ಪ್ರದೇಶಗಳಿಗೆ ನೀರನ್ನುಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರ ನಿಮಿತ್ತ ಎರಡು-ಮೂರು ದಿನಗಳಲ್ಲಿ ಈ ಪ್ರದೇಶಗಳಲ್ಲಿ ನೀರಿನ ಸರಬರಾಜನ್ನು ಸ್ವಲ್ಪಮಟ್ಟಿಗೆ ಸುಧಾರಿಸಲ್ಲಾಗಿದೆ. ವಿದ್ಯುತ್ ಪರಿವರ್ತಕವನ್ನು ತೀವ್ರವಾಗಿ ರಿಪೇರಿ ಮಾಡಿಕೊಡಲು ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಈಗಾಗಲೇ ವ್ಯವಹರಿಸಲಾಗಿದೆ. ವಿದ್ಯುಚ್ಛಕ್ತಿ ಮಂಡಳಿಯು 9-3-1991ರೊಳಗಾಗಿ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಆಶ್ವಾಸನೆಯನ್ನು ನೀಡಿರುತ್ತದೆ. ಸಮಸ್ಯೆಯು ಗಂಭೀರವಾದಲ್ಲಿ ಈ ಪ್ರದೇಶಗಳಿಗೆ ಟ್ಯಾಂಕರ್‌ಮೂಲಕ ನೀರನ್ನು ಸಾಗಾಣಿಕೆ ಮಾಡಲಾಗುವುದು. ಮಂಗಳೂರು ನಗರದೊಳಗಿನ ನೀರು ಸರಬರಾಜನ್ನು ಮಂಗಳೂರು ಮಹಾನಗರ ಪಾಲಿಕೆಯು ನೋಡಿಕೊಳ್ಳುತ್ತದೆ.

ಶಾಸನ ರಚನಾ ಕಾರ್ಯಕಲಾಪಗಳು

1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಧರ್ಮಸಿಂಗ್ : (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ,1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಧರ್ಮಸಿಂಗ್ : (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, 1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ

ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧಪಕ್ಷದ ಉಪನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕ ಬರಗಾಲ ಪರಿಸ್ಥಿತಿಯ ಬಗ್ಗೆ ತಾವು ನಿನ್ನೆ ನನಗೆ ಅವಕಾಶ ಕೊಟ್ಟಿದ್ದು, ಈ ದಿವಸ ಅದನ್ನು ಮುಂದುವರಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ನಿಮಗೆ ಮೊದಲನೆಯದಾಗಿ ಧನ್ಯವಾದಗಳನ್ನು ಅರ್ಪಿಸಿ, ಇವತ್ತು ರಾಜ್ಯದಲ್ಲಿರತಕ್ಕ ಭೀಕರ ಬರಗಾಲ ಪರಿಸ್ಥಿತಿ ಏನಿದೆ ಆ ಪರಿಸ್ಥಿತಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಕೆಲವು ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾಗಿ ಕಳೆದ 8-10 ವರ್ಷಗಳಿಂದ ನಮ್ಮರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ. ಅದರ ಪರಿಣಾಮವಾಗಿ ಹಿಂದೆ ಸಹ ನಮ್ಮ ರಾಜ್ಯದಲ್ಲಿ ಇದೇ ಸದನದಲ್ಲಿ ಹಲವಾರು ಬಾರಿ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂದಿರುವ ಬಗ್ಗೆ ಚರ್ಚೆಯಾಗಿದೆ. ನಾನು ಈಗತಾನೆ 1971-72-73-74ನೇ ವರ್ಷಗಳಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲೂ ಸಹಿತ ಈ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಿರುವುದರ ಬಗ್ಗೆ ಮತ್ತು ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮಗಳ ಬಗ್ಗೆ ಸಹಿತ ನಾನು ಅವತ್ತು ನಡೆದಿರತಕ್ಕಂಥ ಚರ್ಚೆಯನ್ನು ನೋಡಿದ್ದೇನೆ. ಆಗ 1971-72ರಲ್ಲಿ ಅಂತರ್ಜಲಕ್ಕೆ ಯಾವುದೇ ರೀತಿಯ ತೊಂದರೆ ಇರಲಿಲ್ಲ, ಸಾಕಷ್ಟು ನೀರು ಇತ್ತು. 1970ರ ಹಿಂದೆ ನಮ್ಮ ರಾಜ್ಯದಲ್ಲಿ ಸಾಕಷ್ಟು ನೀರು ಮಳೆಯಾಗುತ್ತಿದ್ದರೂ 20 ವರ್ಷಗಳ ಹಿಂದಿನ ಮಾತು ಏನಿದೆ, ನೀರು ಇಲ್ಲದಿದ್ದರಿಂದ 1972ರಲ್ಲಿ ಎಂದೂ ಕಾಣದೆ ಇದ್ದಂಥ ಏನು ಒಂದು ಬರಗಾಲದ ಪರಿಸ್ಥಿತಿ ಬೀದರ್, ಕಲ್ಬುರ್ಗಿ, ರಾಯಚೂರು, ಬಿಜಾಪುರದಲ್ಲಿ ಅಥವಾ ಪಟ್ಟಣ ಪ್ರದೇಶಗಳಲ್ಲಿ ಇತ್ತು ಇವತ್ತು 20 ವರ್ಷಗಳ ನಂತರ, ಕಳೆದ ಹತ್ತು ವರ್ಷಗಳಲ್ಲಿ ವಿಶೇಷವಾಗಿ ಮಳೆ ಕಡಿಮೆಯಾಗಿರುವುದರಿಂದ ಎಂದೂ ಕಾಣದೇ ಇರತಕ್ಕಂಥ ಭೀಕರ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಮಾನ್ಯ ಕಂದಾಯ ಸಚಿವರಾಗಿರತಕ್ಕಂಥ ಶ್ರೀ ಖರ್ಗೆಯವರು ಈ ದೃಷ್ಟಿಯಲ್ಲಿ ಏನೂ ಕೆಲಸ ಮಾಡಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಏಕೆಂದರೆ, ನಿನ್ನೆ ದಿವಸ ಅವರು ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಕೆಲಸ ಮಾಡಿರುವುದನ್ನಾದರೂ ಕೊನೇ ಪಕ್ಷ ಹೇಳದೇ ಹೋದರೆ ಕೆಲಸ ಮಾಡುವವರಿಗೆ ಉತ್ಸಾಹ ಇರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇರತಕ್ಕಂಥ ಮಂತ್ರಿಗಳ ಪೈಕಿ ಸನ್ಮಾನ್ಯ ಖರ್ಗೆಯವರು ಈ ವಿಚಾರದಲ್ಲಿ ಪ್ರವಾಸವನ್ನು ಮಾಡಿದ್ದಾರೆ. ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಶಾಸಕರನ್ನು ಕರೆಸಿ ಮಾತನಾಡಿದ್ದಾರೆ. ಅವರು ಹೇಳಿರತಕ್ಕಂಥ ಸಲಹೆಗಳನ್ನು ಬರೆದು ಇಟ್ಟುಕೊಂಡಿದ್ದಾರೆ. ಅಧಿಕಾರಿಗಳಿಗೆ ಸೂಚನೆಗಳನ್ನು ಸಹಿತ ಕೊಟ್ಟಿದ್ದಾರೆ. ಅಧಿಕಾರಿಗಳಿಗೆ ಸಹಿತ ಎಲ್ಲಿ ಕುಡಿಯುವ ನೀರಿಲ್ಲ, ಅಲ್ಲಿ ನೀರನ್ನು ತಕ್ಷಣ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಎಲ್ಲಿ ಮೇವಿಲ್ಲ, ಅಲ್ಲಿ ಮೇವು ಸಂಗ್ರಹ ಮಾಡುವುದಕ್ಕೆ ಕೆಲಸ ಮಾಡಿ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಗೆ ಸಹಿತ ಬಂದುಹೋಗಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು: ನಿಮ್ಮ ಜಿಲ್ಲೆ ಬಹಳ ದೂರ ಏನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಆದರೂ ಬಂದು ಹೋಗಿದ್ದಾರೆ. ಅವರು ಹೆಚ್ಚಾಗಿ ಗುಲ್ಬರ್ಗಾದಲ್ಲಿ ಇರುತ್ತಿದ್ದರೂ ಸಹ ಅಷ್ಟು ದೂರದಿಂದ ಬಂದು ಹೋಗಿದ್ದಾರೆ.